# ಭತ್ತದ ಬಿಂಗೋ

ಭತ್ತದ ಗದ್ದೆಯಲ್ಲೊಂದು ರೋಮಾಂಚಕ ಪ್ರಯಾಣ ಮಾಡಲು ಸಿದ್ಧರಿದ್ದೀರಾ? ಇದೀಗ ಕೊಯ್ಲಿನ ಸಮಯದಲ್ಲಿ ಭತ್ತದ ಜಗತ್ತನ್ನು ಅನ್ವೇಷಿಸುತ್ತಾ ಮೋಜು ಮಾಡುವ ಸಮಯ! ಈ ಕೆಳಗಿನ ಯಾವುದೇ ಮೂರು ಅಡ್ಡ ಅಥವಾ ಕೆಳಗೆ ಹುಡುಕಿ ಮತ್ತು **ಬಿಂಗೋ** ಎಂದು ಹೇಳಿ!

| | | |
|---|---|---|
| ಬಿದ್ದ ಭತ್ತವನ್ನು ಹೆಕ್ಕಿ ತಿನ್ನುತ್ತಿರುವ ಹಕ್ಕಿಗಳು  |  ಭತ್ತದ ತೋರಣ | ಭತ್ತದ ಕಟ್ಟನ್ನು ಬಡಿಯುತ್ತಿರುವ ರೈತರು  |
|  ನೆರೆ ಕೋಲು | ಭತ್ತದಿಂದ ತುಂಬಿದ ಎತ್ತಿನ ಗಾಡಿ  |  ಭತ್ತದ ಗದ್ದೆಯಲ್ಲಿ ಜಿಗಿದಾಡುತ್ತಿರುವ ಹುಳಗಳು |
|  ಗಾಳಿಯಲ್ಲಿ ಭತ್ತವನ್ನು ತೂರುವುದು | ಹುಳಗಳನ್ನು ಹಿಡಿಯುತ್ತಿರುವ ಬೆಳ್ಳಕ್ಕಿ ಹಾಗೂ ಮೈನಾಗಳು  |  ಭತ್ತದ ಹುಲ್ಲಿನ ಕಟ್ಟುಗಳು |

**ನಾನು ನೋಡಿದ ಅಂಶಗಳು**

ಈ ಕಾಲದಲ್ಲಿ ಭತ್ತದ ಗದ್ದೆಯಲ್ಲಿ ಕಂಡು ಬರುವ ಬಣ್ಣಗಳು:

ಒಂದು ಕಾಲದಲ್ಲಿ ಸಾಮಾನ್ಯವಾಗಿ ಕಂಡು ಬರುತ್ತಿರುವ ಆದರೆ ಈಗ ಅಪರೂಪವಾದ ಅಂಶಗಳು:

ಕೊಯ್ಲಿನ ನಂತರ ಅಕ್ಕಿಯಿಂದ ಮಾಡುವ ಸ್ಥಳೀಯ ಖಾದ್ಯ/ ಆಹಾರ ಪದಾರ್ಥಗಳು:



## ನಿಮಗಿದು ಗೊತ್ತೇ?

ನೆರೆಕೋಲು ಒಂದು ಸಾಂಪ್ರದಾಯಿಕ ಸಲಕರಣೆಯಾಗಿದ್ದು, ಇದನ್ನು ಭತ್ತವನ್ನು ಹುಲ್ಲಿನಿಂದ ಬೇರ್ಪಡಿಸುವಾಗ ಬಳಸುತ್ತಾರೆ. ಇದರ ಬಾಗಿದ ಚೂಪಾದ ತುದಿಯು, ಹುಲ್ಲನ್ನು ಸುಲಭವಾಗಿ ಭತ್ತದ ಧಾನ್ಯದಿಂದ ಬೇರ್ಪಡಿಸಲು ಸಹಾಯ ಮಾಡುತ್ತದೆ. ಈ ಸಲಕರಣೆ ಭತ್ತಕ್ಕೆ ಮಾತ್ರ ಸೀಮಿತವಾಗಿಲ್ಲ, ಇದನ್ನು ಬೇರೆ ಧಾನ್ಯಗಳ ಕೊಯ್ಲಿನಲ್ಲೂ ಬಳಸುತ್ತಾರೆ.

Nature Classrooms

This work is licensed to Nature Classrooms under CC BY-SA 4.0

ಅನುವಾದ: ಅದಿತಿ ರಾವ್

# ಚಟುವಟಿಕೆಗಳು!



## ಒಂದು ದಿನದ ಮಟ್ಟಿಗೆ ಬೆಳ್ಳಕ್ಕಿಯಾಗಿರಿ!

ನೀವೊಂದು ಆಕಾಶದೆತ್ತರದಲ್ಲಿ ಹಾರುತ್ತಿರುವ ಬೆಳ್ಳಕ್ಕಿ ಎಂದು ಊಹಿಸಿಕೊಳ್ಳಿ. ನಿಮಗೆ ಆಗಸದಿಂದ, ಕೆಳಗೆ ಭತ್ತದ ಕೊಯ್ಲು ಮಾಡುತ್ತಿರುವ ರೈತರು ಕಾಣುತ್ತಾರೆ, ಹಾಗಾಗಿ ನೀವು ಒಂದು ಚಿಕ್ಕ ಭೇಟಿ ನೀಡಲು ಸುಂಯ್ ಎಂದು ಕೆಳಗೆ ಹಾರಿ ಬರುತ್ತೀರಿ. ಗದ್ದೆಯಲ್ಲಿನ ಬೆಳ್ಳಕ್ಕಿಯಾಗಿ ನಿಮ್ಮ ಈ ದಿನದ ಬಗ್ಗೆ ಒಂದು ಕವಿತೆ ಅಥವಾ ಕಥೆಯನ್ನು ಬರೆಯಬಲ್ಲಿರೆ? ನೀವು ಚಿತ್ರವನ್ನು ಕೂಡ ಬಿಡಿಸಬಹುದು.

## ಒಂದು ದಿನದ ಮಟ್ಟಿಗೆ ಭತ್ತ ಬೆಳೆಯುವ ರೈತರಾಗಿರಿ!

ನೀವೊಂದು ಭತ್ತವನ್ನು ಬೆಳೆಯಲು ಸಿದ್ಧರಾದ ರೈತ ಎಂದು ಊಹಿಸಿಕೊಳ್ಳಿ. ನಿಮ್ಮ ಹಿರಿಯರಲ್ಲಿ, ಅಲ್ಲಿನ ಸ್ಥಳೀಯ ಭತ್ತದ ವಿಧಗಳ ಬಗ್ಗೆ ಕೇಳಿ ತಿಳಿಯಿರಿ. ಪ್ರತಿಯೊಂದು ವಿಧದ ವಿಶೇಷತೆ ಏನು ಎಂದು ಕೇಳಿರಿ. ಜೊತೆಗೆ ನೀವು ಯಾವ ವಿಧದ ಭತ್ತವನ್ನು ಬೆಳೆಯುತ್ತೀರಿ? ಅದೇ ಭತ್ತವನ್ನು ಏಕೆ ಆಯ್ದುಕೊಂಡಿರಿ ಎಂದು ತಿಳಿಸಿ.




## ನಿಮಗಿದು ಗೊತ್ತೇ?



ನಿಮಗೆ ಗೊತ್ತೇ? ಕರ್ನಾಟಕದ ಉತ್ತರ ಕನ್ನಡ ಜಿಲ್ಲೆಯಲ್ಲಿ, ಭತ್ತವನ್ನು ಬೆಳೆಯಲೆಂದೇ ಒಂದು ಪ್ರಸಿದ್ಧವಾದ ಜನಾಂಗವಿದೆ! ಅವರೇ 'ಹಾಲಕ್ಕಿ ಗೌಡರು'. ಅವರನ್ನು ಏಕೆ ಹಾಗೆ ಕರೆಯುತ್ತಾರೆ ಎಂಬುದನ್ನು ನೀವು ಕಂಡು ಹಿಡಿಯಬಲ್ಲಿರೇ?

ನಿಮಗೆ ಕರ್ನಾಟಕದಲ್ಲಿ ಭತ್ತವನ್ನೇ ಪ್ರಮುಖವಾಗಿ ಬೆಳೆಯುವ ಬೇರೆ ಯಾವುದಾದರು ಜನಾಂಗ ಗೊತ್ತಿದೆಯೇ?

Nature Classrooms

This work is licensed to Nature Classrooms under CC BY-SA 4.0

ಅನುವಾದ: ಅದಿತಿ ರಾವ್